# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಪ.ವಿ/ಉ.ಕು/58ನೇ ವಾ. ಘ/2023-24.

ಪರೀಕ್ಷಾ ಭವನ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-560 056.
ದಿನಾಂಕ: 12-09-2023.

ಗೆ,

ಮಾನ್ಯರೇ,

ವಿಷಯ: 58ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ/ರ್‍ಯಾಂಕ್/ಬಹುಮಾನ ವಿಜೇತ ವಿದ್ಯಾರ್ಥಿಗಳಿಗೆ ಹಾಗೂ ಪಿಹೆಚ್.ಡಿ. ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಆಹ್ವಾನ ಪತ್ರಿಕೆ/ಬ್ಯಾಡ್ಜ್ ವಿತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಪಟ್ಟಂತೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, 58ನೇ ವಾರ್ಷಿಕ ಘಟಿಕೋತ್ಸವವು ದಿನಾಂಕ 29-09-2023 ನೇ ಶುಕ್ರವಾರ ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಂಗಳೂರು – 01 ಇಲ್ಲಿ ಬೆಳಗ್ಗೆ 11.00 ಘಂಟೆಗೆ ಜರುಗಲಿದೆ. ಈ ಸಂಬಂಧವಾಗಿ ಚಿನ್ನದ ಪದಕ/ರ್‍ಯಾಂಕ್/ಬಹುಮಾನ ವಿಜೇತ ವಿದ್ಯಾರ್ಥಿಗಳು ಹಾಗೂ ಪಿ.ಹೆಚ್.ಡಿ. ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ 58ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಪ್ರವೇಶವಿರುತ್ತದೆ. ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಶುಲ್ಕವನ್ನು ಸಂದಾಯಮಾಡದೆ ಇದ್ದ ಪಕ್ಷದಲ್ಲಿ ಶುಲ್ಕವನ್ನು ಸಂದಾಯಮಾಡಿ ಚಲನ್‌ಗಳನ್ನು ಪರೀಕ್ಷಾ ವಿಭಾಗದ ಆಯಾ ಪದವಿಗಳಿಗೆ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸತಕ್ಕದ್ದು.

ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜ್‌ಗಳನ್ನು **ದಿನಾಂಕ 26.09.2023 ರಿಂದ 28.09.2023 ವರೆಗೆ** ಕಛೇರಿ ಕೆಲಸದ ವೇಳೆಯಲ್ಲಿ ಪರೀಕ್ಷಾ ವಿಭಾಗದ ಆಯಾ ಪದವಿಗಳಿಗೆ ಸಂಬಂಧಪಟ್ಟ ವಿಭಾಗದಲ್ಲಿ ಖುದ್ದಾಗಿ ಬಂದು ಪಡೆಯಲು ಈ ಮೂಲಕ ತಿಳಿಸಲಾಗಿದೆ.

ಆದುದರಿಂದ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು/ವಿಭಾಗದ ಮುಖ್ಯಸ್ಥರು ನೀಡಿರುವ ಗುರುತಿನ ಚೀಟಿ ತಪ್ಪದೇ ತರತಕ್ಕದ್ದು. ಘಟಿಕೋತ್ಸವಕ್ಕೆ ಹಾಜರಾಗುವ ಎಲ್ಲಾ ಚಿನ್ನದ ಪದಕ ರ್‍ಯಾಂಕ್/ಬಹುಮಾನ ವಿಜೇತ ವಿದ್ಯಾರ್ಥಿಗಳು ಹಾಗೂ ಪಿ.ಹೆಚ್.ಡಿ. ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಯು.ಜಿ.ಸಿ. ಮಾರ್ಗಸೂಚಿಯಂತೆ **ಖಾದಿ ಅಥವಾ ಹ್ಯಾಂಡ್‌ಲೂಮ್ಸ್‌ನ ಬಿಳಿಯಬಣ್ಣದ ಉಡುಪುಗಳನ್ನು** ಧರಿಸಿ ಘಟಿಕೋತ್ಸವ ಪ್ರಾರಂಬವಾಗುವ 2 ಗಂಟೆ ಮುಂಚಿತವಾಗಿ ಹಾಜರಾಗಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

12/9/23

ಕುಲಸಚಿವರು (ಮೌಲ್ಯಮಾಪನ)